ಇದನ್ನು ನೆನಪಿಸಿಕೊಂಡರೆ ಸಾಕು ಯಾರೂ ಮನೆಯಲ್ಲಿ ಫ್ಯಾನ್ ಉಪಯೋಗಿಸುವಂತಿಲ್ಲ ಆ ರೀತಿಯಲ್ಲಿ ಹೊಸದಾಗಿ ತಾವು ಹೊರಡಿಸಿರುವ ನೋಟಿಫಿಕೇಷನ್ ಪರಿಣಾಮ ಬೀರುತ್ತಿದೆ. ಅಷ್ಟು ಕೆಟ್ಟ ರೀತಿಯಲ್ಲಿ ಇರುವ ನೋಟಿಫಿಕೇಷನ್‌ನ್ನು ದಯವಿಟ್ಟು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದಲ್ಲದೆ ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡಿ ಈ ಹಿಂದೆ ಜಂಟಿ ಸದನ ಸಮಿತಿ ಕೊಟ್ಟಂಥ ಸಲಹೆಗಳ ಬಗ್ಗೆ ಪುನಃ ಕೂಲಂಕುಷವಾಗಿ ಪರಿಶೀಲನೆ ಮಾಡಿ ಚರ್ಚೆ ಮಾಡಿ ಅದರ ಆಧಾರದ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11. ಪ್ರಕಟಣೆ

ದಿನಾಂಕ 28ನೇ ಜುಲೈ 1997ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಪ್ರಸಕ್ತ ಅಧಿವೇಶನದಲ್ಲಿ ಪ್ರತಿ ದಿನ ಬೆಳಗ್ಗೆ 10-00 ಘಂಟೆಯಿಂದ ಅಪರಾಹ್ನ 1-30 ರವರೆಗೆ ಮತ್ತು ಮಧ್ಯಾಹ್ನ 2-30 ರಿಂದ ಸಂಜೆ 6-00 ಘಂಟೆಯವರೆಗೆ ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

30-7-97 ಬುಧವಾರ ಹಾಗೂ 31-7-97 ಗುರುವಾರ	ಪ್ರಶ್ನೋತ್ತರ ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಅನುದಾನ ಬೇಡಿಕೆಗಳ ಮೇಲೆ ಚರ್ಚೆ
1-8-97 ಶುಕ್ರವಾರ	1) ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸಚಿವರಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು. 2) ಪ್ರಶ್ನೋತ್ತರ 3) ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಅನುದಾನ ಬೇಡಿಕೆಗಳ ಮೇಲೆ ಚರ್ಚೆ 4) ಖಾಸಗಿ ಕಾರ್ಯಕಲಾಪಗಳು

4-8-97	1)	ಪ್ರಶ್ನೋತ್ತರ
ಸೋಮವಾರ	2)	ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಅನುದಾನ ಬೇಡಿಕೆಗಳ ಮೇಲೆ ಚರ್ಚೆ
5-8-97	1)	ಉನ್ನತ ಶಿಕ್ಷಣ ಮತ್ತು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಅನುದಾನ ಬೇಡಿಕೆಗಳ ಬಗ್ಗೆ ಸಚಿವರಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು
ಮಂಗಳವಾರ	2)	ಪ್ರಶ್ನೋತ್ತರ
	3)	ವಾರ್ತಾ ಮತ್ತು ಪ್ರಚಾರ, ಪ್ರವಾಸೋದ್ಯಮ, ಕಲೆ ಸಂಸತಿ ಮತ್ತು ಕನ್ನಡಾಭಿವೃದ್ಧಿ, ಜಿಲ್ಲಾಡಳಿತ, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ
6-8-97	1)	ಪ್ರಶ್ನೋತ್ತರ
ಬುಧವಾರ	2)	ವಾರ್ತಾ ಮತ್ತು ಪ್ರಚಾರ, ಪ್ರವಾಸೋದ್ಯಮ, ಕಲೆ ಸಂಸತಿ ಮತ್ತು ಕನ್ನಡಾಭಿವೃದ್ಧಿ ಜಿಲ್ಲಾಡಳಿತ ಭೂ ಕಂದಾಯ ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.
7-8-97		
ಗುರುವಾರ	1)	ವಾರ್ತಾ ಮತ್ತು ಪ್ರಚಾರ, ಪ್ರವಾಸೋದ್ಯಮ, ಕಲೆ ಸಂಸತಿ ಮತ್ತು ಕನ್ನಡಾಭಿವೃದ್ಧಿ, ಜಿಲ್ಲಾಡಳಿತ, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ ಇಲಾಖೆಗಳ ಅನುದಾನ ಬೇಡಿಕೆಗಳಿಗೆ ಸಂಬಂಧಪಟ್ಟ ಸಚಿವರುಗಳಿಂದ ಹಾಗೂ ಮತಕ್ಕೆ ಹಾಕುವುದು.
	2)	ಪ್ರಶ್ನೋತ್ತರಗಳು
	3)	ಲೋಕೋಪಯೋಗಿ, ಕಾಮಗಾರಿ, ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು, ಗ್ರಾಮೀಣಾಭಿವೃದ್ಧಿ, ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ, ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

11-8-97

ಸೋಮವಾರ 1) ಪ್ರಶ್ನೋತ್ತರ

2) ಲೋಕೋಪಯೋಗಿ, ಕಾಮಗಾರಿ, ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು, ಗ್ರಾಮೀಣಾಭಿವೃದ್ಧಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ, ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

12-8-97

ಮಂಗಳವಾರ 1) ಲೋಕೋಪಯೋಗಿ, ಕಾಮಗಾರಿ, ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು, ಗ್ರಾಮೀಣಾಭಿವೃದ್ಧಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು ಇಲಾಖೆಗಳಿಗೆ ಸಂಬಂಧಿಸಿದ ಸಚಿವರುಗಳಿಂದ ಉತ್ತರ ಮತ್ತು ಮತಕ್ಕೆ ಹಾಕುವುದು.

2) ಪ್ರಶ್ನೋತ್ತರ.

3) ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಕಲ್ಯಾಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಣ್ಣ ನೀರಾವರಿ ಭಾರೀ ಮತ್ತು ಮಧ್ಯಮ ನೀರಾವರಿ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

13-8-97

ಬುಧವಾರ 1) ಪ್ರಶ್ನೋತ್ತರ

2) ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಕಲ್ಯಾಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಣ್ಣ ನೀರಾವರಿ ಭಾರೀ ಮತ್ತು ಮಧ್ಯಮ ನೀರಾವರಿ ಇಲಾಖೆಗಳ ಅನುಧಾನ ಬೇಡಿಕೆಗಳ ಮೇಲೆ ಚರ್ಚೆ.

14-8-97

ಗುರುವಾರ 1) ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಕಲ್ಯಾಣ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಣ್ಣ ನೀರಾವರಿ, ಭಾರೀ ಮತ್ತು ಮಧ್ಯಮ ನೀರಾವರಿ ಇಲಾಖೆಗಳಿಗೆ ಸಂಬಂಧಿಸಿದ ಸಚಿವರುಗಳಿಂದ ಉತ್ತರ ಮತ್ತು ಮತಕ್ಕೆ ಹಾಕುವುದು.

2) ಪ್ರಶ್ನೋತ್ತರ

3) ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತುಪಡಿಸಿ) ಗಣಿ ಮತ್ತು ಭೂ ವಿಜ್ಞಾನ, ಅರಣ್ಯ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

18-8-97

ಸೋಮವಾರ 1) ಪ್ರಶ್ನೋತ್ತರ

2) ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತುಪಡಿಸಿ) ಗಣಿ ಮತ್ತು ಭೂ ವಿಜ್ಞಾನ, ಅರಣ್ಯ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

19-8-97

ಮಂಗಳವಾರ 1) ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತುಪಡಿಸಿ) ಗಣಿ ಮತ್ತು ಭೂ ವಿಜ್ಞಾನ, ಅರಣ್ಯ ಇಲಾಖೆಗಳಿಗೆ ಸಂಬಂಧಿಸಿದ ಸಚಿವರುಗಳಿಂದ ಉತ್ತರ ಮತ್ತು ಮತಕ್ಕೆ ಹಾಕವುದು.

2) ಪ್ರಶ್ನೋತ್ತರ.

3) ಆರಕ್ಷಕ ಸೇವೆಗಳು, ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ, ಸಚಿವಾಲಯ ಸಾಮಾನ್ಯ ಆಡಳಿತ ಇತ್ಯಾದಿ, ವಕ್ಫ್ ವಿದ್ಯುಚ್ಛಕ್ತಿ ಯೋಜನೆಗಳು, ಬೆಂಗಳೂರು ಅಭಿವೃದ್ಧಿ, ರಾಜ್ಯದ ಆಬಕಾರಿ ಇಲಾಖೆಗಳಿಗೆ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

20-8-97

ಬುಧವಾರ 1) ಪ್ರಶ್ನೋತ್ತರ

2) ಆರಕ್ಷಕ ಸೇವೆಗಳು, ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ ಸಚಿವಾಲಯ ಸಾಮಾನ್ಯ ಆಡಳಿತ ಇತ್ಯಾದಿ, ವಕ್ಫ್, ವಿದ್ಯುಚ್ಛಕ್ತಿ ಯೋಜನೆಗಳು, ಬೆಂಗಳೂರು ಅಭಿವೃದ್ಧಿ ರಾಜ್ಯದ ಆಬಕಾರಿ ಇಲಾಖೆಗಳಿಗೆ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

21-8-97

ಗುರುವಾರ 1) ಆರಕ್ಷಕ ಸೇವೆಗಳು, ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ ಸಚಿವಾಲಯ, ಸಾಮಾನ್ಯ ಆಡಳಿತ ಇತ್ಯಾದಿ, ವಕ್ಫ್ ವಿದ್ಯುಚ್ಛಕ್ತಿ ಯೋಜನೆಗಳು, ಬೆಂಗಳೂರು ಅಭಿವೃದ್ಧಿ ರಾಜ್ಯದ ಆಬಕಾರಿ ಇಲಾಖೆಗಳಿಗೆ ಮುಖ್ಯಮಂತ್ರಿಗಳಿಂದ ಉತ್ತರ ಮತ್ತು ಮತಕ್ಕೆ ಹಾಕುವುದು.

2) ಪ್ರಶ್ನೋತ್ತರ.

22-8-97

ಶುಕ್ರವಾರ 1) ಪ್ರಶ್ನೋತ್ತರ

2) ಉಳಿದಿರುವ ಅನುದಾನ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

3) ಖಾಸಗಿ ಕಾರ್ಯಕಲಾಪಗಳು.

25-8-97 ಪ್ರಶ್ನೋತ್ತರ, ಶಾಸನ ರಚನೆ.
ಸೋಮವಾರ

26-8-97 ಪ್ರಶ್ನೋತ್ತರ, ಶಾಸನ ರಚನೆ.
ಮಂಗಳವಾರ

27-8-97 ಪ್ರಶ್ನೋತ್ತರ, ಶಾಸನ ರಚನೆ.
ಬುಧವಾರ

28-8-97 ಪ್ರಶ್ನೋತ್ತರ, ಶಾಸನ ರಚನೆ.
ಗುರುವಾರ

29-8-97
ಶುಕ್ರವಾರ 1) ಪ್ರಶ್ನೋತ್ತರ, ಶಾಸನ ರಚನೆ.

2) ಖಾಸಗಿ ಕಾರ್ಯಕಲಾಪಗಳು.

ದಿನಾಂಕ 8-8-97 ರಂದು ಉಪವೇಶನ ಇರುವುದಿಲ್ಲ.
ಈ ಶಿಫಾರಸ್ಸುಗಳನ್ನು ಸದನವು ಅಂಗೀಕರಿಸಿತೆಂದು ಭಾವಿಸುತ್ತೇನೆ.

ಅಧ್ಯಕ್ಷರು : ಮೇಲ್ಕಂಡ ಸದನ ನಡೆಯುವ ಎಲ್ಲಾ ದಿನಗಳಲ್ಲೂ ಸದನದ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮತ್ತು ಪತ್ರಕರ್ತರಿಗೆ ಮೂರನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ 1-30 ರಿಂದ 2-30ರವರೆಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಎಲ್ಲರೂ ಸಹಕರಿಸಬೇಕೆಂದು ಈ ಮೂಲಕ ತಿಳಿಸಬಯಸುತ್ತೇನೆ. ಈಗ ಸದನವನ್ನು 3 ಘಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು 1.52 ಘಂಟೆಗೆ ಮುಂದೂಡಲ್ಪಟ್ಟು ಮತ್ತೆ 3-00 ಘಂಟೆಗೆ ಸಮಾವೇಶಗೊಳ್ಳಲು ನಿರ್ಣಯಿಸಿತು)

ಸದನವು ಮಧ್ಯಾಹ್ನ 3.10 ಕ್ಕೆ ಸಮಾವೇಶಗೊಂಡಿತ್ತು.

ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ಪೀಠವನ್ನು ಅಲಂಕರಿಸಿದ್ದರು.

2. ನಿಲುವಳಿ ಸೂಚನೆ :

ವಿದ್ಯುತ್ ದರವನ್ನು ಹೆಚ್ಚಿಸಿರುವ ಬಗ್ಗೆ (ಮುಂದುವರಿದ ಚರ್ಚೆ)

+ ಶ್ರೀ ಬಿ. ಎಸ್. ಯಡಿಯೂರಪ್ಪ : (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೇ ಪ್ರತಿಪಕ್ಷದ ಈ ಭಾಗದಲ್ಲಿ ಕುಳಿತಿರತಕ್ಕ ನಾವೆಲ್ಲ ಒಟ್ಟಾಗಿ ಸೇರಿ ಇವತ್ತು ಈ ವಿದ್ಯುತ್ ದರವನ್ನು ಮತ್ತೆ 300 ಕೋಟಿ ರೂಪಾಯಿ ಜಾಸ್ತಿ ಮಾಡಿರುವಂಥ ನೋಟಿಫಿಕೇಷನ್ ಅನ್ನು ಸಂಪೂರ್ಣವಾಗಿ ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುವುದಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ನಾವು ತಮ್ಮ ಮುಂದಿಟ್ಟಿದ್ದೇವೆ. ಬಹುಶಃ ಆ ಭಾಗದಲ್ಲಿ ಮತ್ತು ಈ ಭಾಗದಲ್ಲಿ ಕುಳಿತಿರತಕ್ಕ ಎಲ್ಲಾ ಶಾಸಕರನ್ನು ನಾನು ಮೊನ್ನೆ ಪ್ರತಿಯೊಂದು ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಭೇಟಿಯಾಗಿದ್ದೇನೆ. ಈ ವಿದ್ಯುತ್ ದರವನ್ನು ಶೇಕಡ 35 ರಿಂದ 60-70-80 ಪರ್ಸೆಂಟ್ ಜಾಸ್ತಿ ಮಾಡಿ 700 ಕೋಟಿ ರೂಪಾಯಿ ಹೆಚ್ಚಿಗೆ ತೆರಿಗೆ ಹಾಕಿ ಗ್ರಾಹಕರ ಕೀಲನ್ನು ಮುರಿದಂಥ ಸರ್ಕಾರ ಈ ಇಲಾಖೆ ಮತ್ತೊಮ್ಮೆ 300 ಕೋಟಿ ರೂಪಾಯಿ ತೆರಿಗೆಯನ್ನು ಎಲ್ಲಾ ವರ್ಗದ ಗ್ರಾಹಕರ ಮೇಲೆ ಏರಿಸುವಂಥ ಆದೇಶವನ್ನು ಹೊರಡಿಸಿದೆ.

ಕಳೆದ ಒಂದೂವರೆ ಎರಡು ತಿಂಗಳಿನಿಂದ ರಾಜ್ಯದ ಉದ್ದಗಲಕ್ಕೆ 45 ದಿವಸ, ಪ್ರತಿಯೊಂದು ಜಿಲ್ಲೆಯಲ್ಲೂ 2 ದಿವಸ ಪ್ರವಾಸ ಮಾಡುವಂತಹ ಪ್ರಯತ್ನವನ್ನು ಮತ್ತು ಅಲ್ಲಿರುವಂತಹ ಹಿರಿಯರ ಜೊತೆ ಸಮಾಲೋಚನೆ ಮಾಡುವಂತಹ ಪ್ರಯತ್ನವನ್ನು ನಾನು ಮತ್ತು ನಮ್ಮ ಪಕ್ಷದ ಮುಖಂಡರು ಮಾಡಿ ಬಂದಿದ್ದೇವೆ. ಬಹುಶಃ ಆ ಕಡೆ ಈ ಕಡೆ ಕುಳಿತಿರುವಂತಹ ಶಾಸಕರ ಪ್ರಶ್ನೆ ಇದಲ್ಲ. ಕಳೆದ ಒಂದು ವರ್ಷದಿಂದೇಚೆಗೆ ಮೂರು ಬಾರಿ ವಿದ್ಯುತ್ ದರವನ್ನು ಜಾಸ್ತಿ ಮಾಡಿದರು.ಸದನ ಸಮಿತಿ ಮಾಡಿ ನಾವು ಒಂದು ವರದಿಯನ್ನು ಕೊಟ್ಟ ಮೇಲೆ ಅದಕ್ಕೆ ಗೌರವ ಕೊಡದೆ, ಒಂದುರೀತಿಯ ಲೆಜ್ಜೆಗೆಟ್ಟ ರೀತಿಯಲ್ಲಿ ಮತ್ತೊಮ್ಮೆ 2ನೇ ಬಾರಿಗೆ ವಿದ್ಯುತ್ ದರವನ್ನು ಜಾಸ್ತಿ ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಈಗ ಮೂರನೇ ಬಾರಿ ದರ ಏರಿಸಲು ಯೋಚಿಸುತ್ತಿದೆ. ಕುಡಿಯುವ ನೀರಿನ ದರವನ್ನು ಜಾಸ್ತಿಮಾಡಿದಿರಿ, ಸಾರಿಗೆ ದರವನ್ನು ಜಾಸ್ತಿ ಮಾಡಿದಿರಿ, ಮನೆಗಳಲ್ಲಿ ವಾಸ ಮಾಡುವಂತಹ ಮನೆಯ ಆ ಜನರ ಟ್ಯಾಕ್ಸ್‌ನ್ನು ಜಾಸ್ತಿ ಮಾಡಿದಿರಿ, ಒಂದು ಅಂದಾಜಿನ ಪ್ರಕರಾ, ಒಂದು ಮಧ್ಯಮವರ್ಗದ ಕುಟುಂಬಕ್ಕೆ